

**ಚಟುವಟಿಕೆ24: ಎಲೆಗಳನ್ನು ಪುನರ್ ರಚಿಸುವುದು**

**ವಯಸ್ಸು:** 8 ವರ್ಷ ಮೇಲ್ಪಟ್ಟವರು

**ಅಗತ್ಯ ವಸ್ತುಗಳು:** ಎ4 ಪೇಪರ್, ಪೆನ್ಸಿಲ್, ಎಲೆಗಳು

**ಹಂತಗಳು:**

1. ನಿಮ್ಮ ಮನೆಯ ಸುತ್ತ ಮುತ್ತ ಸಿಗುವ ವಿವಿಧ ಆಕಾರ ಮತ್ತು ಗಾತ್ರದ ಕೆಲವು ಎಲೆಗಳನ್ನು ಸಂಗ್ರಹಿಸಿ.
2. ನೀವು ಸಂಗ್ರಹಿಸಿದ ಎಲೆಗಳ ಆಕಾರ, ಗಾತ್ರ, ವಿನ್ಯಾಸ ಮತ್ತು ಮಾದರಿಗಳನ್ನು ಗಮನಿಸಿ. ಅದನ್ನು ಎಲ್ಲಾ ಆಯಾಮಗಳಿಂದ ಗಮನಿಸಿ.
3. ಎಳೆಗಳು ದೊಡ್ಡದಾಗಿದೆಯೇ ಅಥವಾ ಚಿಕ್ಕದಾಗಿದೆಯೇ? ನೀವು ಆ ಎಲೆಗಳನ್ನು ನೋಡಿದಾಗ ಅದು ನಿಮಗೆ ಬೇರೆ ಏನಾನ್ನಾದರೂ ನೆನಪಿಸುತ್ತದೆಯೇ? ಎಲೆಗಳ ಮಾದರಿಗಳು ಅಥವಾ ಆಕಾರವು ನಿಮಗೆ ಏನನ್ನಾದರೂ ನೆನಪಿಸುತ್ತದೆಯೇ? ಅದು ಬೇರೆ ಯಾವುದಾದರೂ ಒಂದು ಭಾಗವಾಗಿರಬಹುದು.
4. ಈ ಎಲೆಗಳನ್ನು ಬೇರೆ ಯಾವುದೋ ಎಂದು ಮರು ಕಲ್ಪಿಸಿಕೊಳ್ಳಿ. ಅದು ಎಷ್ಟು ವಿಭಿನ್ನ ವಿಷಯಗಳಾಗಿರಬಹುದು?
5. ಎಲೆಗಳನ್ನು ಸೂಕ್ಷ್ಮವಾಗಿ ಗಮನಿಸಿಕೊಂಡು ರೇಖೆ, ಆಕಾರಗಳು, ವಿನ್ಯಾಸಗಳು, ಮಾದರಿಗಳು ಮತ್ತು ವಿವರಗಳನ್ನು ಚಿತ್ರಿಸಿ.
6. ಮರುರೂಪಿಸಿದ ಎಲೆಗಳನ್ನು ವಸ್ತುವಾಗಿ ಪರಿವರ್ತಿಸಲು ನಿಮ್ಮ ಸ್ಕೆಚ್‌ಗೆ ವಿವರಗಳನ್ನು ಸೇರ್ಪಡೆ ಮಾಡಿ.

7. ನಿಮ್ಮ ಒಂದು ಚಿಂತನೆಯನ್ನು ಚಿತ್ರಿಸಿದ ನಂತರ, ಒಂದು ನಿರ್ದಿಷ್ಟ ಎಲೆ ನಿಮಗೆ ಬೇರೆಯದನ್ನು ಹೇಗೆ ನೆನಪಿಸಿತು ಎಂಬ ನಿಮ್ಮ ಪ್ರಕ್ರಿಯೆಯನ್ನು ಹಂಚಿಕೊಳ್ಳಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತು ಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇನ್ಸ್ಟಾ ಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರ ಚಟುವಟಿಕೆಗಳು ಮತ್ತು ಮಾಹಿತಿಗಳನ್ನು ಪಡೆಯಲು ನೀವು ನಮ್ಮನ್ನು ಅನುಸರಿಸಬಹುದು.*

*ArtSparks Foundation*

ART SPARKS
CURIOSITY. CREATIVITY. LEARNING.

[*www.art-sparks.org*](http://www.art-sparks.org)